ಪ್ರಬಂಧ



ಜಿ.ವಿ. ಆನಂದಮೂರ್ತಿ

ಕಲೆ: ವಿಶ್ವನಾಥ ಎ.ಎಸ್.

# ಗುಡಿಹಳ್ಳಿಯ ನೋಡಿರಣ್ಣ...

ಎಲ್ಲ ಹಳ್ಳಿಗಳಂತಲ್ಲ ನಮ್ಮ ಗುಡಿಹಳ್ಳಿ. ಸ್ವರ್ಗದ ಬಾಗಿಲ ಮುಂದೆ ನಿಂತ ಹಳ್ಳಿ ಇದು. ಹತ್ತಾರು ಗುಡಿಗಳಿರುವ ಈ ಊರನ್ನು ನಮ್ಮ ಸುತ್ತಿನಲ್ಲಿ 'ಗುಡಿಹಳ್ಳಿ' ಎಂದೇ ಕರೆಯುತ್ತಾರೆ. ಸಕಲೆಂಟು ಕೋಮಿನವರಿದ್ದ ನಮ್ಮ ಗ್ರಾಮದವರು ತಮ್ಮನ್ನು ಇಂಥ ಜಾತಿಗೆ ಸೇರಿದವರೆಂದು ಎಂದೂ ಗುರುತಿಸಿಕೊಳ್ಳುತ್ತಿರಲಿಲ್ಲ. ತಾವೆಲ್ಲ ಮಾನವ ಕುಟುಂಬದ ಸದಸ್ಯರು ಎಂಬ ತಿಳಿವಳಿಕೆಯಲ್ಲಿದ್ದರು. ಪ್ರತಿದಿನ ಸೂರ್ಯ ಹುಟ್ಟಿದಾಗ ಮೊದಲು ನಮ್ಮ ಹಳ್ಳಿಗೆ ಬೆಳಕಿನ ಕಟ್ಟು ನೀಡಿ; ನಂತರ ಉಳಿದ ಕಡೆಗೆ ಬೆಳಗುತ್ತಾನೆ ಎಂಬ ನಂಬಿಕೆ ಈಗಲೂ ಗುಡಿಹಳ್ಳಿಯವರಲ್ಲಿದೆ. ಮಾನವತೆ ಹಾಗೂ ಬಾಂಧವ್ಯದ ಹೊರತು ಬೇರೇನೂ ಇಲ್ಲದಿದ್ದ ಊರು ಅದು.

ಓಬಳ ದೇವರ ಗುಡಿ, ಬಸವಣ್ಣನ ಗುಡಿ, ಜುಂಜಪ್ಪನ ಪೌಳಿ, ಕರಿಯಮ್ಮ ದೇವರ ಗುಡಿ, ಮಾರಮ್ಮನ ಗುಡಿ, ಗಾದ್ರಿ ಪಾಲನಾಯಕನ ಗುಡಿ, ಅಹೋಬಲ ನರಸಿಂಹಸ್ವಾಮಿ ಗುಡಿ, ಗೌರಮ್ಮನ ಗುಡಿ, ಎಲ್ಲಮ್ಮನ ಗುಡಿಗಳಿದ್ದವು. ಎಲ್ಲ ಗುಡಿಗಳಲ್ಲಿ ಉರಿಯುತ್ತಿದ್ದ ದೀಪದ ಬೆಳಕು ಗುಡಿಹಳ್ಳಿಯ ಹಾದಿಬೀದಿಯಲ್ಲಿದ್ದ ಎಲ್ಲರ ಮನೆಯ ಬೆಳಕನ್ನು ಬೆಳಗುತ್ತಿತ್ತು. ಊರಿನಲ್ಲಿದ್ದ ಎಲ್ಲ ದೇವರುಗಳೂ ಸಾಮರಸ್ಯದಿಂದ ಇದ್ದವು. ಜಾತಿ, ಧರ್ಮ ಹಾಗೂ ದೇವರುಗಳ ನಡುವೆ ಎಂದೂ ಜಗಳ, ವೈಷಮ್ಯ, ದ್ವೇಷವನ್ನೇ ನಮ್ಮ ಊರು ಕಂಡಿರಲಿಲ್ಲ. ಇದಕ್ಕೆ ಇಂಬು ಕೊಡುವಂತೆ, ನಮ್ಮ ಊರಿನಲ್ಲಿ ಯಾರೂ ಯಾರನ್ನೂ ಹೆಸರ್ಹಿಡಿದು ಕರೆಯುತ್ತಿರಲಿಲ್ಲ! ಎಲ್ಲರೂ ಎಲ್ಲರನ್ನೂ ರಕ್ತ ಸಂಬಂಧ ಪದಗಳ ಮೂಲಕವೇ ಕರೆಯುತ್ತಿದ್ದರು. 'ಮಾವ', 'ಅಳಿಯ', 'ದೊಡ್ಡಪ್ಪ', 'ಚಿಗಪ್ಪ', 'ಅವ್ವ', 'ಅತ್ತೆ' ಎಂಬ ಸಂಬಂಧಸೂಚಕ ಪದಗಳಿಂದ ಸಂಬೋಧಿಸುತ್ತಿದ್ದರು. ಹೀಗಾಗಿ ಅವರ ನಡುವೆ ಕಲಹ, ವೈಷಮ್ಯ, ದ್ವೇಷಗಳನ್ನು ಈ ಶಬ್ದಗಳು ಇಲ್ಲವಾಗಿಸುತ್ತಿದ್ದವು.

ಗುಡಿಹಳ್ಳಿಯಲ್ಲಿ ಒಂದು ಭಜನಾ ತಂಡವಿದೆ. ಆ ತಂಡದ ಸದಸ್ಯರು ಪ್ರತಿ ಶನಿವಾರ ಹೊತ್ತು ಕನಿಗಿದ ಮೇಲೆ ಪೀರ್ಲ ಗುಡಿಯ ಮುಂಭಾಗದ ಕಟ್ಟೆಯ ಮೇಲೆ ಕುಳಿತು ಭಜನೆ ಪದಗಳನ್ನು ಹಾಡುತ್ತಾರೆ. ಮುತ್ಯಾಲಪ್ಪ ಮತ್ತು ಜೂಲಯ್ಯ ಇದರ ನೇತೃತ್ವ ವಹಿಸಿಕೊಳ್ಳುತ್ತಾರೆ. ಬಹುಪಾಲು